taken any follow up action with regard to reservation for SC/STs in this Mysore Minerals Ltd. Because this cell is having control over all the public limited companies and also Government Companies. If so, any such attempt has been made by this cell in respect of reservation of SC/STS in Government Companies. If this is not done I would like to now from the Governme it what steps they are going to take to implement the reservation order in Government Companies ?

SRI AZEEZ SAIT.—Sir, I have already answered a similar question regarding appointment in Vikrant Tyres Ltd.. I agree in some of the Government Companies reservation of posts in respect of SC/STs are not being maintained properly. Now, I have taken up this matter with the Public Undertakings Cell and I am also thinking of bringing an enactment imposing certain conditions in respect of appointments bearing in mind the reservation of posts to SC/STs in Government companies.

Land belonging to late Sri Gubbi Veeranna, at Gandhinagar Bangalore.

506 SRI T. R. SHAMANNA (Basavanagudi)—Will the Minister for Municipal Administration be pleased to state.—

(*a*) when was the land belonging to late Sri Gubbi Veeranna at Gandhinagar was taken back by the Bangalore City Corporation ;

(*b*) when was the Theatre construction work at the above land taken up ;

(*c*) at what stage is the work ;

(*d*) when it will be completed ?

SRI H. C. SRIKANTAIAH (Minister for Municipal Administration)—

(*a*) During October 1965.

(*b*) During May 1970.

(*c*) Foundation and costing of columns have been done and the work abandoned at this stage.

(*d*) The work will be completed when finance are available.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೆ, ನಮ್ಮ ಮಂತ್ರಿಗಳಿಗೆ ವಿಚಾರ ಗೊತ್ತಿರುವುದ ಕ್ಕಿಂತಲೂ ನನಗೆ ಹೆಚ್ಚು ಗೊತ್ತಿದೆ ಎಂದು ಹೇಳಿದರೆ ಅವರು ತಪ್ಪು ತಿಳಿದುಕೊಳ್ಳುವುದಿಲ್ಲ ಎಂದು ಹೇಳಿ ಈ ಪ್ರಶ್ನೆ ಯನ್ನು ಕೇಳುತ್ತೇನೆ. ಸ್ವಾಮಿ, ಹಿಂದೆ ಗಾಂಧಿನಗರದಲ್ಲಿ ಗುಬ್ಬಿ ವೀರಣ್ಣನವರ ಒಂದು ನಾಟಕ ಮಂಡಲಿ ಇತ್ತು. ಆ ನಾಟಕ ಮಂಡಲಿ ಜಾಗವನ್ನು ಕಾರ್ಪೊರೇಷನ್ನಿನವರು ಒಂದು ಲಕ್ಷ ರೂಪಾಯಿ ಕೊಟ್ಟು ಮಾಪಸ್ಸು ತೆಗೆದುಕೊಂಡರು. ಇಪ್ಪತ್ತು ತಿಮೆ ಹಣವನ್ನು ಬ್ಯಾಂಕಿನಲ್ಲಿ ಇಟ್ಟಿದ್ದರೆ ಅಸಲಿನಷ್ಟೇ ಬಡ್ಡಿ ಕೂಡ ಬರುತ್ತಿತ್ತು. Instead of spending the money to

purchase site and lying it vacant for all these years, you could have invested that amount in a bank Thus you would have got very good interest for that investment.

† ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ಇದು ಸಾಕಷ್ಟು ವಿಳಂಬ ಆಗಿದೆ. ೧೯೬೫ನೇ ಇಸವಿಯಲ್ಲಿ ರೆಸಲ್ಯೂಷನ್ ಮಾಡಿ ಗುಬ್ಬಿ ಕಂಪನಿಯ ನಾಟಕ ರಂಗ ಮಂದಿರ ಏನಿತ್ತು ಅದನ್ನು ಒಂದು ಲಕ್ಷ ರೂಪಾಯಿಗಳಿಗೆ ಕಾರ್ಪೊರೇಷನ್ನಿನವರು ವಹಿಸಿಕೊಂಡಿದ್ದಾರೆ. ಅದನ್ನು ವಹಿಸಿಕೊಂಡನಂತರ ಆಲ್ಲೆ ಕಟ್ಟಡ ಕಟ್ಟಲಿಕ್ಕೆ ೨ ಲಕ್ಷ ೭೨ ಸಾವಿರ ರೂಪಾಯಿ ಒಂದು ಎಸ್ಟಿಮೇಟ್ ಮಾಡಿ ಟೆಂಡರ್ಸ್ ಕರೆದು ಟೆಂಡರ್ಸ್ ಸಹ ಅಪ್ರೂವ್ ಆಗಿ ಲೋಯಸ್ಟ್ ಟೆಂಡರ್ ಬಿ. ಏಸ್. ಎಸ್. ಇ. ಎಲ್. ಎಂಟರ್‌ಪ್ರೈಸಸ್ ಅವರಿಗೆ ಕೊಟ್ಟಮೇಲೆ ಅವರು ಕೆಲಸ ಮಾಡದೇ ಆ ಕಂಪನಿ ಅಬಾಲಿಷ್ ಆದ್ದರಿಂದ ಅವರ ಪರವಾಗಿ ಲಕ್ಷ್ಮೀನರಸಿಂಹಯ್ಯ ಎಂಬುವವರು ನಾವು ಇದನ್ನು ಪೂರೈಸುತ್ತೇವೆಂದು ಹೇಳಿ ಸುಮಾರು ೪೮ ಸಾವಿರ ರೂಪಾಯಿ ಖರ್ಚು ಮಾಡಿ ಆದರೂ ಸಹ ಅಸಹಾಯಕತೆಯನ್ನು ತೋರಿಸಿದ್ದರಿಂದ ಆ ಕೆಲಸ ಅಲ್ಲಿಗೆ ನಿಂತುಹೋಯಿತು. ಅದು ಆದಮೇಲೆ ಫಿಲಂ ಕಾರ್ಪೊರೇಷನ್ನಿನವರು ಆ ಲ್ಯಾಂಡ್ ನವರಿಗೆ ಕೊಡಿ ಕಾರ್ಪೊರೇಷನ್ನಿಗೆ ಎಷ್ಟು ಹಣ ಖರ್ಚಾಗಿದೆ ಆ ಹಣವನ್ನು ಕೊಡುತ್ತೇವೆ ಎಂಬ ಅಭಿಪ್ರಾಯವನ್ನು ತೋರಿಸಿದ್ದರಿಂದ ಕಾರ್ಪೊರೇಷನ್ನಿನವರು ಅದನ್ನು ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿ, ನಮ್ಮ ಗವರ್ನ್‌ಮೆಂಟ್ ಆರ್‌ಕಿಟೆಕ್ಟ್ ಕಡೆಯಿಂದ ಪುನಃ ಒಂದು ಎಸ್ಟಿಮೇಟ್ ಮಾಡಿಸಿ ಆಲ್ಲಿ ೨೫ ಲಕ್ಷ ೬೧ ಸಾವಿರ ರೂಪಾಯಿಗಳಿಗೆ ಒಂದು ದೊಡ್ಡ ಥಿಯೇಟರ್ ಮಾಡಬೇಕೆಂದು ಅಭಿಪ್ರಾಯ ಇಟ್ಟುಕೊಂಡು ಟೆಂಡರ್ಸ್ ಕರೆದು ಲೋಯಸ್ಟ್ ಟೆಂಡರ್ ಮೆಸರ್ಸ್ ಆಜ್ಜಪ್ಪ ಅಂಡ್ ಸನ್ಸ್ ಅವರಿಗೆ ಕೊಡುವುದು ಬಂದಾಗ ಈ ಥಿಯೇಟರ್‌ಗೆ ಹೆಚ್ಚು ಹಣ ಖರ್ಚು ಮಾಡಿ ಆಲ್ಲಿ ಕಟ್ಟುವುದಕ್ಕಿಂತಲೂ ಕಾವೇರಿ ಭವನ ಪಕ್ಕ ಸಂಭ್ರಾಶ್‌ನಗರದಲ್ಲಿ ಕಟ್ಟಿದರೆ ಅನುಕೂಲವಾಗುತ್ತದೆಂಬ ಅಭಿಪ್ರಾಯದಿಂದ ಅದನ್ನು ಪುನರ್ ಪರಿಶೀಲನೆ ಮಾಡಿಲಿಕ್ಕೆ ೨೪ನೇ ಫೆಬ್ರುವರಿ ೧೯೭೯ರಲ್ಲಿ ಪುನಃ ಸರ್ಕಾರದಿಂದ ಕಳುಹಿಸಿಕೊಟ್ಟಿದ್ದೇವೆ. ನಮ್ಮ ಕ್ಲಾರಿಫಿಕೇಷನ್‌ಗೆ ಇನ್ನೂ ಅವರಿಂದ ಉತ್ತರ ಬಂದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ನನ್ನ (ಈ) ಪ್ರಶ್ನೆಗೆ ಉತ್ತರವಾಗಿ ಅದನ್ನು ಯಾವಾಗ ಪೂರ್ತಿಗೊಳಿಸಲಾಗುವುದು ಎಂದು ಕೇಳಿದ್ದಕ್ಕೆ ಹಣ ದೊರಕಿದಾಗ ಎಂದು ಹೇಳಿದ್ದೀರಿ. ನಮ್ಮ ಯುಟಿಲಿಟಿ ಬಿಲ್ಡಿಂಗ್ ಮೇಯೋ ಹಾಲ್‌ನಲ್ಲಿದೆ. ಅದರ ಎಸ್ಟಿಮೇಟ್ ೧ ಕೋಟಿ ೬೦ ಲಕ್ಷ ಇಪ್ಪೊತ್ತು ಎರಡೂವರೆ ಕೋಟಿ ರೂಪಾಯಿ ಆಗಿದೆ. ಇನ್ನು ಸಂಭ್ರಾಷ್ ನಗರದಲ್ಲಿ ದೊಡ್ಡ ಕಾಲುವೆ ಮಾಡಲಿಕ್ಕೆ ಮೊದಲು ಎಸ್ಟಿಮೇಟ್ ೧೪ ಲಕ್ಷ ರೂಪಾಯಿ ಆದರೆ ಈಗಿನ ಎಸ್ಟಿಮೇಟ್ ೪೫ ಲಕ್ಷ ರೂಪಾಯಿ ಈ ರೀತಿ ಅನೇಕ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಒಂದಕ್ಕೆ ಮೂರರಷ್ಟು ಜಾಸ್ತಿಯಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿರುವಾಗ ನಾಲ್ಕು ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಥಿಯೇಟರ್ ಕಟ್ಟಲಿಕ್ಕೆ ಹಣ ಇರಲಿಲ್ಲವೇ ? ಇವೊತ್ತು ಕಾರ್ಪೊರೇಷನ್ನಿನಲ್ಲಿ ಕ್ಲೋಸಿಂಗ್ ಬ್ಯಾಲೆನ್ಸ್ ಎರಡು ಕೋಟಿ ರೂಪಾಯಿ ಇದೆ. ಅವರು ೩-೪ ಲಕ್ಷ ರೂಪಾಯಿ ಖರ್ಚು ಮಾಡದೇ ಇರತಕ್ಕದ್ದು ಅಧಿಕಾರಿಯ ಒಂದು ಕರ್ತವ್ಯ ಲೋಪವೆ ಅಥವಾ ಬೇರೆ ಏನಾದರೂ ಕಾರಣ ಇದೆಯೇ ತಿಳಿಸಬೇಕು ?

When crores of rupees are being allowed as balance would they not have spent three or five lakhs ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈಗ ಕಾರ್ಪೊರೇಷನ್ ಆನೇಕ ಕೆಲಸಗಳು ಸ್ಥಗಿತವಾಗಿವೆ. ಕೋಟ್ಯಾಂತರ ರೂಪಾಯಿಗಳ ಕೆಲಸವನ್ನು ಕಾರ್ಪೊರೇಷನ್‌ನವರು ಪೂರ್ಣಮಾಡುವುದಕ್ಕೆ ಸಾಧ್ಯವಾಗಿಲ್ಲ Particularly in this case it is very much delayed from 1965 upto 1979 Till now they could not complete or start this work. Now the estimated amount has gone to Rs 25,61 000/-. Any how we will take up this work as early as possible and I issue the instructions to the Corporation Authorities to start the work.

ಶ್ರೀ ಟಿ.ಆರ್. ಶಾಮಣ್ಣ.—ಈಗ ನನಗೆ ಒಂದು ಹೊಟ್ಟೆ ಉರಿ ಏನೆಂದರೆ, ಇಲ್ಲಿ ಒಂದು ಕನ್ನಡ ನಾಟಕ ಮಂಡಲಿಯನ್ನು ಮಾಡುತ್ತೇವೆಂದು ಮಾನ್ಯ ಜಿ.ಹೆಚ್. ವೀರಣ್ಣನವರಿಗೆ ಹೇಳಿದ್ದ. ಈಗ ಅದು

ಆಗದಿದ್ದರೆ ಆ ಪಾಪ ನನಗೆ ತಟ್ಟುತ್ತದೆ. ನಾವುಗಳಿಲ್ಲರೂ ಗುಬ್ಬಿ ವೀರಣ್ಣನವರ ಕಲೆಯ ಬಗ್ಗೆ ಬಹಳ ವಾಗಿ ಕೊಂಡಾಡುತ್ತಿದ್ದೇವೆ. ಆದ್ದರಿಂದ ಅವರ ಜ್ಞಾಪಕಾರ್ಥವಾಗಿ ಒಂದು ನಾಟಕ ಮಂದಿರವನ್ನಾ ದರೂ ಕಟ್ಟಲು ನಮಗೆ ಸಹಾಯ ಮಾಡುತ್ತೀರಾ ? ಎಂದು ತಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಪೆಚ್.ಸಿ. ಶ್ರೀಕಂಠಯ್ಯ.—ಗುಬ್ಬಿ ವೀರಣ್ಣನವರ ಬಗ್ಗೆ ನೀವು ಹೊಟ್ಟೆ ಉರಿ ಪಟ್ಟುಕೊಳ್ಳ ಬೇಕಾದ್ದು ಏನೂ ಬೇಡ. ಆ ಜಾಗ ಕಾರ್ಪೊರೇಷನ್‌ನವರಿಗೆ ಸೇರಿದ್ದು. ಅದು ವೀರಣ್ಣನವರ ಸ್ವಂತ ಜಾಗವಲ್ಲ. ಹಿಂದೆ ಕಾರ್ಪೊರೇಷನ್ ಲ್ಯಾಂಡನ್ನು ಅವರಿಗೆ ಲೀಸ್ ಕೊಟ್ಟಿದ್ದರು. ಈಗ ಅದನ್ನು ಕಾರ್ಪೊರೇಷನ್‌ನವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ಟಿ.ಆರ್. ಶಾಮಣ್ಣ.—ಆ ಲೀಸ್ ೧೦೦ ವರ್ಷಕ್ಕೆ ಇರುವುದು. ತಮಗೆ ಅನುಮಾನವಿದ್ದರೆ ಫೈಲ್ ತೆಗೆಸಿ ನೋಡಿ. ಅದು ಏನೇ ಇದ್ದರೂ ಈಗ ಆ ಜಾಗವನ್ನು ಸ್ಥಳಪರಿಶೀಲನೆ ಮಾಡಿ ಆದಷ್ಟು ಬೇಗ ಕೆಲಸ ಪ್ರಾರಂಭಿಸುತ್ತೀರಾ ?

ಶ್ರೀ ಪೆಚ್.ಸಿ. ಶ್ರೀಕಂಠಯ್ಯ.—ಇದರ ಬಗ್ಗೆ ಸರ್ಕಾರದ ಕಡೆಗೆ ಒಂದು ಎಸ್ಪಿಮೇಟ್ ಬಂದಿದೆ. ಏನೋ ಒಂದು ಕ್ಲಾರಿಫಿಕೇಷನ್ ಕೇಳಿ ಆ ಫೈಲನ್ನು ವಾಪಸ್ಸು ಕಳುಹಿಸಿದ್ದೇವೆ. ಅದು ಬಂದಕೂಡಲೇ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sites distributed in Dakshina Kannada District

888 DR. DAMODAR MULKY (Moodabidri).—Will the Minister of State for Housing be pleased to state.—

(a) the total number of sites distributed to the landless families so far in Dakshina Kannada District and total number of sites distributed in Mangalore and Karkala Taluks separately ,

(b) the total number of sites of which physical possession had been given to the grantees,

(c) The number of sites of which physical possessian had been given to grantees at Athikaributtu Village of Mangalore Taluk ?

SRI P. F. RODRIGUES (Minister of State for Housing).—

(a) 59.022, Mangalore Taluk 9,951. Karkala Taluk 7,500 (upto end of February 1979.)

(b) 51,745.

(c) Nill.

ಶ್ರೀ ದಾಮೋದರ ಮುಲ್ಕಿ.—ಸ್ವಾಮಿ, ಇಲ್ಲಿ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೫೧,೭೪೫ ನಿವೇಶನಗಳನ್ನು ಸ್ವಾಧೀನಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದು ಕೇವಲ ಹಕ್ಕು ಪತ್ರವನ್ನು ಕೊಟ್ಟಿದ್ದೀರೊ ಅಥವಾ ಅವರಿಗೆ ಸ್ಥಳವನ್ನು ತೋರಿಸಿ ಅದರ ಒಡೆತನವನ್ನು ಕೊಟ್ಟಿದ್ದೀರೋ ?

ಇನ್ನು ಎರಡನೆಯದಾಗಿ ಮಂಗಳೂರು ಮತ್ತು ಕಾರ್ಕಳ ತಾಲ್ಲೂಕಿನಲ್ಲಿ ಎಷ್ಟು ಸೈಟುಗಳನ್ನು ಫಿಸಿಕಲ್ ಆಗಿ ಸ್ವಾಧೀನಕ್ಕೆ ಕೊಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

†ಶ್ರೀ ಪಿ.ಎಫ್. ರೋಡ್ರಿಗ್ಸ್.—ಈಗ ೫೧,೭೪೫ ನಿವೇಶನಗಳನ್ನು ಫಿಸಿಕಲ್ ಆಗಿ ಸ್ವಾಧೀನಕ್ಕೆ ಕೊಟ್ಟಿದ್ದೇವೆ. ಇಡೀ ತಾಲ್ಲೂಕಿನಲ್ಲಿ ಇನ್ನೂ ೭,೨೭೭ ನಿವೇಶನಗಳನ್ನು ಕೊಡಲಿಕ್ಕೆ ಇದೆ.

ಶ್ರೀ ದಾಮೋದರ ಮುಲ್ಕಿ.—ತಾವು ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿರುವುದರಿಂದ ತಮಗೆ ಎಲ್ಲ ವಿಷಯವೂ ಗೊತ್ತಿದೆ. ಈಗ ೫೧,೭೪೫ ನಿವೇಶನಗಳನ್ನು ಕೊಟ್ಟಿದ್ದೇವೆಂದು ತಾವು